JULY 05, 2025

**AKASHAVANI - DHARWAD**

**PRADESH SAMACHARA (KANNADA) 7.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು:**

**ಬಾಗಲಕೋಟೆಯ, ಚಾಮುಂಡೇಶ್ವರಿ ಸಂಜೀವಿನಿ ಮಹಿಳಾ ಒಕ್ಕೂಟದ ಮುಡಿಗೆ, ರಾಷ್ಟ್ರೀಯ ಆತ್ಮನಿರ್ಭರ ಸಂಘಟನಾ ಪ್ರಶಸ್ತಿಯ, ಗರಿ.**

**ಕಲ್ಯಾಣ ಕರ್ನಾಟಕಕ್ಕೆ, ಹಸಿರು ಪಥ ಯೋಜನೆ; ರಾಜ್ಯ ವನ ಮಹೋತ್ಸವಕ್ಕೆ ಇಂದು, ಅರಣ್ಯ ಇಲಾಖೆ, ಚಾಲನೆ.**

**ಅಸಂಘಟಿತ ವಲಯದ, 35 ಲಕ್ಷ ಕಾರ್ಮಿಕರಿಗೆ, ಕಾರ್ಮಿಕ ಇಲಾಖೆಯಿಂದ, ಉಚಿತ ಸ್ಮಾರ್ಟ್ ಕಾರ್ಡ್ ವಿತರಣೆ.**

**ಇಂದು ಅಂತಾರಾಷ್ಟ್ರೀಯ ಸಹಕಾರ ದಿನಾಚರಣೆ.**

<><><>

**ಈಗ ವಾರ್ತೆಗಳ ವಿವರ**

<><><>

**ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಶನ್ ಯೋಜನೆಯಡಿ, ಬಾಗಲಕೋಟೆ ಜಿಲ್ಲೆ, ಗುಳೇದಗುಡ್ಡ ತಾಲೂಕು, ಕಟಗೇರಿ ಗ್ರಾಮ ಪಂಚಾಯ್ತಿಯ, ಚಾಮುಂಡೇಶ್ವರಿ ಸಂಜೀವಿನಿ ಮಹಿಳಾ ಒಕ್ಕೂಟ, ಪ್ರಥಮ, ರಾಷ್ಟ್ರೀಯ ಆತ್ಮನಿರ್ಭರ ಸಂಘಟನಾ ಪ್ರಶಸ್ತಿಗೆ ಭಾಜನವಾಗಿದೆ. ಚಾಮುಂಡೇಶ್ವರಿ ಸಂಜೀವಿನಿ ಮಹಿಳಾ ಒಕ್ಕೂಟದಡಿ, ಸಾವಿರದ ನಾಲ್ಕು ನೂರು ಕುಟುಂಬಗಳ ಮಹಿಳೆಯರನ್ನು ಸಂಘಟಿಸಲಾಗಿದೆ. 112 ಮಹಿಳಾ ಸ್ವ-ಸಹಾಯ ಸಂಘಗಳು, ಒಕ್ಕೂಟದಡಿ ಕಾರ್ಯನಿರ್ವಹಿಸುತ್ತಿವೆ. ಬಾಗಲಕೋಟೆ ಜಿಲ್ಲಾ ಪಂಚಾಯ್ತಿ ಸಿ.ಇ.ಓ. ಶಶಿಧರ ಕುರೇರ, ಒಕ್ಕೂಟದ ಸದಸ್ಯರನ್ನು, ಅಭಿನಂದಿಸಿದ್ದಾರೆ. ಆಗಸ್ಟ್ 15, ಸ್ವಾತಂತ್ರ್ಯ ದಿನಾಚರಣೆಯಂದು, ಹೊಸ ದಿಲ್ಲಿಯಲ್ಲಿ 2024 ನೇ ಸಾಲಿನ, ಪ್ರಶಸ್ತಿಯನ್ನು ಪ್ರದಾನಿಸಿ, ಗೌರವಿಸಲಾಗುತ್ತಿದೆ.**

<><><>

**ತಾಂತ್ರಿಕ ಮತ್ತು ಅಭಿಯಾಂತ್ರಿಕ ಕ್ಷೇತ್ರದಲ್ಲಿ, ಸ್ನಾತಕ ಮತ್ತು ಸ್ನಾತಕೋತ್ತರ ಪದವಿಧರರು, ಸಮಾಜ ಹಾಗೂ ರಾಷ್ಟ್ರದ ಶ್ರೇಯೋಭಿವೃದ್ಧಿಗೆ ಶ್ರಮಿಸಬೇಕು ಎಂದು ರಾಜ್ಯಪಾಲ ಥಾವರಚಂದ್ ಗೆಹ್ಲೋಟ್, ಕರೆ ನೀಡಿದ್ದಾರೆ. ಬೆಳಗಾವಿ, ವಿಶ್ವೇಶ್ವರಾಯ**

ತಾಂತ್ರಿಕ ವಿಶ್ವವಿದ್ಯಾಲಯದ, 25ನೇ ಘಟಿಕೋತ್ಸವದಲ್ಲಿ ಪದವಿಗಳನ್ನು ಪ್ರದಾನಿಸಿ, ಅವರು ಮಾತನಾಡಿದರು. ವಿಜ್ಞಾನ ಮತ್ತು ತಂತ್ರಜ್ಞಾನದ ಮೂಲಕ, ಜಗತ್ತು ಔದ್ಯೋಗಿಕ ಕ್ರಾಂತಿ ಸಾಧಿಸಿದ್ದು, ಉದ್ಯೋಗ, ಸ್ವಾವಲಂಬನೆ ಜೊತೆ, ದೇಶದ ಅಭ್ಯುದಯಕ್ಕೆ ಕೊಡುಗೆ ನೀಡುವಂತಾಗಬೇಕು, ಎಂದರು. ಇಸ್ರೋ ಅಧ್ಯಕ್ಷ ವಿ.ನಾರಾಯಣನ್ ಸೇರಿದಂತೆ, ಮೂವರು ಗಣ್ಯರಿಗೆ ಡಾಕ್ಟರ್ ಆಫ್ ಸೈನ್ಸ್ ಪದವಿ ಪ್ರದಾನಿಸಿ, ರಾಜ್ಯಪಾಲರು ಗೌರವಿಸಿದರು.

<><><>

ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ, ನಾಗಲಕ್ಷ್ಮೀ ಚೌಧರಿ, ಬೆಳಗಾವಿ ಜಿಲ್ಲೆ, ಚಿಕ್ಕೋಡಿ ತಾಲೂಕು, ಸಾರ್ವಜನಿಕ ಆಸ್ಪತ್ರೆಗೆ ಭೇಟಿ ನೀಡಿ, ಪರಿಶೀಲಿಸಿದರು. ತಾಲೂಕು ಆಸ್ಪತ್ರೆಯಲ್ಲಿ ಮೂಲ ಸೌಕರ್ಯ ಹಾಗೂ ಶುಚಿತ್ವದ ಕೊರತೆ ಇದ್ದು, ಸರ್ಕಾರದ ಗಮನಕ್ಕೆ ತರುವುದಾಗಿ, ತಿಳಿಸಿದರು.  ಆರೋಗ್ಯಾಕಾಂಕ್ಷಿಗಳೊಂದಿಗೆ ಸಂವಾದ ನಡೆಸಿ, ಸಮಸ್ಯೆ ಆಲಿಸಿದರು.

<><><>

ಕೇಂದ್ರ ಪ್ರವಾಸೋದ್ಯಮ ಇಲಾಖೆ, ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣದ ಐತಿಹಾಸಿಕ ಪ್ರವಾಸಿ ತಾಣಗಳನ್ನು, ಅಭಿವೃದ್ಧಿ ಪಡಿಸಲಿದೆ ಎಂದು ಕೇಂದ್ರ ಬೃಹತ್ ಕೈಗಾರಿಕೆ ಖಾತೆ ಸಚಿವ ಎಚ್.ಡಿ ಕುಮಾರಸ್ವಾಮಿ ತಿಳಿಸಿದ್ದಾರೆ.

<><><>

ಹಾವೇರಿ ಜಿಲ್ಲೆ, ರಾಣಿಬೆನ್ನೂರು ತಾಲೂಕು, ಮಲ್ಲೇಶ್ವರ ಗುಡ್ಡ ಹಾಗೂ ಐತಿಹಾಸಿಕ ಐರಣಿ ಕೋಟೆಯನ್ನು, ಪ್ರವಾಸಿ ತಾಣವಾಗಿ ಅಭಿವೃದ್ಧಿ ಪಡಿಸಲಾಗುವುದು ಎಂದು, ಪ್ರವಾಸೋದ್ಯಮ ಖಾತೆ ಸಚಿವ, ಎಚ್.ಕೆ. ಪಾಟೀಲ ತಿಳಿಸಿದ್ದಾರೆ. ರಾಣಿಬೆನ್ನೂರಿನಲ್ಲಿ ಮಾತನಾಡಿದ ಅವರು, ಮಲ್ಲೇಶ್ವರ ಗುಡ್ಡಕ್ಕೆ ಚಾರಣದ ಅನುಕೂಲ ಕಲ್ಪಿಸಲು, ಐದು ವಾಹನಗಳ ವ್ಯವಸ್ಥೆ ಮಾಡಲಾಗಿದೆ, ಸ್ವಾತಂತ್ರ್ಯ ದಿನದಂದು, ಚಾಲನೆ ನೀಡಲಾಗುವುದು ಎಂದರು.

<><><>

'ಉತ್ತಮ ಪ್ರಪಂಚಕ್ಕಾಗಿ, ಸಹಕಾರಿ ಸಂಸ್ಥೆಗಳು; ಸಮಗ್ರ ಹಾಗೂ ಸುಸ್ಥಿರ ಪರಿಹಾರೋಪಾಯಗಳಿಗೆ ಚಾಲನೆ' ಧ್ಯೇಯದೊಂದಿಗೆ, ಇಂದು ಅಂತಾರಾಷ್ಟ್ರೀಯ ಸಹಕಾರಿ ದಿನಾಚರಣೆ. ವಿಶ್ವ ಸಂಸ್ಥೆ, ಪ್ರಸಕ್ತ 2025 ಅನ್ನು, ಸಹಕಾರಿ ವರ್ಷ ಎಂದು ಘೋಷಿಸಿದೆ. ಧಾರವಾಡ ಜಿಲ್ಲಾ ಸಹಕಾರಿ ಯೂನಿಯನ್ ಕಾರ್ಯ ನಿರ್ವಹಣಾಧಿಕಾರಿ, ಮಂಗಳಗೌಡ ದಾನಪ್ಪ ಗೌಡರ, ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ.

<><><>

ಮಂಗಳಗೌಡ ದಾನಪ್ಪ ಗೌಡರ ಧ್ವನಿ 52 ಸೆಕೆಂದುಗಳು

<><><>

ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕೆ ಖಾತೆ ಸಚಿವ, ಪಿಯೂಷ್ ಗೋಯಲ್, ಬೆಂಗಳೂರು ದೇವನಹಳ್ಳಿ, ಏರೋಸ್ಪೇಸ್ ವಿಶೇಷ ಕೈಗಾರಿಕಾ ವಲಯಕ್ಕೆ, ಇಂದು ಸಂಜೆ 4.30 ಕ್ಕೆ  ಭೇಟಿ ನೀಡಲಿದ್ದಾರೆ.

<><><>

ಈಗ ಪ್ರಕಟಣೆ,
ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಕಲ್ಯಾಣ ಕರ್ನಾಟಕದ 7 ಜಿಲ್ಲೆಗಳಲ್ಲಿ, 9 ಸಾವಿರ ಹೆಕ್ಟರ್ ಪ್ರದೇಶದಲ್ಲಿ, ಅರಣ್ಯೀಕರಣ ಯೋಜನೆ ರೂಪಿಸಲಾಗಿದೆ ಎಂದು, ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ. ಕಲಬುರಗಿಯಲ್ಲಿ ಮಾತನಾಡಿದ ಸಚಿವರು, 53 ಕೋಟಿ 55 ಲಕ್ಷ ರೂಪಾಯಿ ವೆಚ್ಚದಲ್ಲಿ, ಅರಣ್ಯ ಇಲಾಖೆ, 'ಕಲ್ಯಾಣ ಕರ್ನಾಟಕ ಹಸಿರು ಪಥ ಯೋಜನೆ' ರೂಪಿಸಿ, 5 ಸಾವಿರ ಕಿಲೋ ಮೀಟರ್ ಉದ್ದ, ರಸ್ತೆಯ ಇಕ್ಕೆಲಗಳಲ್ಲಿ ಗಿಡ ನೆಡಲು, ಪ್ರಸ್ತಾವ ಹಾಗೂ ನೀಲನಕ್ಷೆ ಸಿದ್ಧ ಪಡಿಸಿದೆ, ಎಂದರು. ಪ್ರಸ್ತುತ, ಸಾವಿರದ 848 ಕಿಲೋ ಮೀಟರ್ ಉದ್ದ, ರಸ್ತೆಯ ಇಕ್ಕೆಲಗಳಲ್ಲಿ 8 ಲಕ್ಷ ಸಸಿ ನೆಡುವ ಕಾರ್ಯ, ಪ್ರಗತಿಯಲ್ಲಿದೆ.

<><><>

ಕಲಬುರಗಿಯ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು ಆವರಣದಲ್ಲಿ, ಹಸಿರು ಪಥ ಯೋಜನೆಗೆ, ಇಂದು ಮಧ್ಯಾಹ್ನ 12.30ಕ್ಕೆ, ಅರಣ್ಯ ಖಾತೆ ಸಚಿವ ಈಶ್ವರ ಖಂಡ್ರೆ ಚಾಲನೆ ನೀಡಲಿದ್ದಾರೆ.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿಯವರು, ಆಕಾಶವಾಣಿಯ ಜನಪ್ರಿಯ, ಮನ್ ಕಿ ಬಾತ್ ಕಾರ್ಯಕ್ರಮದ, 123ನೇ ಆವೃತಿಯಲ್ಲಿ, ಕಲಬುರಗಿ ರೊಟ್ಟಿಯ ಬಗ್ಗೆ ಉಲ್ಲೇಖಿಸಿ, ಸ್ವಾವಲಂಬಿಯಾಗಿ ಬದುಕು ಕಟ್ಟಿಕೊಂಡ, ಮಹಿಳೆಯರ ಛಲವನ್ನು ಶ್ಲಾಘಿಸಿದ್ದಕ್ಕೆ, ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ, ಪ್ರಧಾನಮಂತ್ರಿಯವರನ್ನು ಅಭಿನಂದಿಸಿದ್ದಾರೆ. ಕಲಬುರಗಿ ಜಿಲ್ಲೆ, ಚಿತ್ತಾಪುರದಲ್ಲಿ, 18 ಕೋಟಿ 41 ಲಕ್ಷ ರೂಪಾಯಿ ವೆಚ್ಚದಲ್ಲಿ ನೂತನವಾಗಿ ನಿರ್ಮಿಸಿದ, ಪ್ರಜಾಸೌಧವನ್ನು ಸಚಿವರು ಉದ್ಘಾಟಿಸಿ, ವಿವಿಧ ಯೋಜನೆಗಳಡಿ, 517 ಜನ ಫಲಾನುಭವಿಗಳಿಗೆ ಸೌಲಭ್ಯಗಳನ್ನು ವಿತರಿಸಿದರು.

<><><>

ಅಂಧತ್ವ ನಿಯಂತ್ರಣ ರಾಷ್ಟ್ರೀಯ ಯೋಜನೆ ಅಡಿ, ರಾಜ್ಯ ಸರ್ಕಾರ ಆಶಾಕಿರಣ ಯೋಜನೆ ಜಾರಿಗೊಳಿಸಿ, ಅಂಧತ್ವ ನಿವಾರಣೆಗೆ ಸಂಕಲ್ಪಿಸಿದೆ. ವಿಜಯನಗರ ಜಿಲ್ಲೆಯಲ್ಲಿ, ಪ್ರಸ್ತುತ 12 ದೃಷ್ಟಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಜಿಲ್ಲಾ ಆರೋಗ್ಯಾಧಿಕಾರಿ ಡಾಕ್ಟರ ಶಂಕರ ನಾಯ್ಕ ಪ್ರದೇಶ ಸಮಾಚಾರಕ್ಕಾಗಿ, ಈ ಕುರಿತು, ಮಾಹಿತಿ ನೀಡಿದ್ದಾರೆ.

<><><>

ಡಾ.ಶಂಕರ ನಾಯ್ಕ ಧ್ವನಿ 40 ಸೆಕೆಂದುಗಳು

<><><>

ರಾಜ್ಯದ ಒಟ್ಟು 35 ಲಕ್ಷ ಕಾರ್ಮಿಕರಿಗೆ, ಸರ್ಕಾರದ ವಿವಿಧ ಸೌಲಭ್ಯಗಳ, ಫಲಾನುಭವಿಯಾಗಿಸಲು, ಸ್ಮಾರ್ಟ್ ಕಾರ್ಡ್‌ಗಳನ್ನು, ಉಚಿತವಾಗಿ ನೀಡಲಾಗುತ್ತಿದೆ ಎಂದು, ಕಾರ್ಮಿಕ ಖಾತೆ ಸಚಿವ ಸಂತೋಷ ಲಾಡ ತಿಳಿಸಿದ್ದಾರೆ. ವಿಜಯನಗರದಲ್ಲಿ ವಿವಿಧ

ವರ್ಗಗಳ, ಅಸಂಘಟಿತ ಕಾರ್ಮಿಕರಿಗೆ, ಸ್ಮಾರ್ಟ್ ಕಾರ್ಡ್ ವಿತರಿಸಿ, ಅವರು ಮಾತನಾಡಿದರು. ಪಾರಂಪರಿಕ ವೃತ್ತಿಯಲ್ಲಿ ತೊಡಗಿರುವ, ಹಿಂದುಳಿದ, ಅಲೆಮಾರಿ ಹಾಗೂ ಅರೆ ಅಲೆಮಾರಿ ಸೇರಿದಂತೆ, 38 ವರ್ಗಗಳಿಗೆ ಸೇರಿದ ಕಾರ್ಮಿಕರು, ಕುಲ ಕಸುಬಿನಲ್ಲಿ ತೊಡಗಿರುವ 27 ವರ್ಗಗಳು ಸೇರಿದಂತೆ, 91 ವರ್ಗಗಳ ಕಾರ್ಮಿಕರನ್ನು ಸಮೀಕ್ಷಿಸಿ, ಗುರುತಿಸಲಾಗಿದೆ ಎಂದರು.

<><><>

ಒಲಿಂಪಿಕ್ಸ್ ನಲ್ಲಿ, ಉಭಯ ಪದಕ ವಿಜೇತ, ಜಾವೆಲಿನ್ ಎಸೆತಗಾರ, ನೀರಜ್ ಚೋಪ್ರಾ ಅಂತಾರಾಷ್ಟ್ರೀಯ ಕ್ಲಾಸಿಕ್ ಜಾವೆಲಿನ್ ಕ್ರೀಡಾಕೂಟ, ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಇಂದು, ಆರಂಭವಾಗಲಿದೆ.

<><><>

ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ, ಇಂದು ಹಾವೇರಿ ಜಿಲ್ಲೆ, ಸವಣೂರು ಹಾಗೂ ಶಿಗ್ಗಾವ ತಾಲೂಕಿಗೆ ಭೇಟಿ ನೀಡಲಿದ್ದಾರೆ. ಕೇಂದ್ರ ಆರೋಗ್ಯ ಮಿಶನ್ ಯೋಜನೆಯಡಿ ಚಳ್ಳಾಳದಲ್ಲಿ ನಿರ್ಮಾಣಗೊಂಡ ಆರೋಗ್ಯ ಮತ್ತು ಕ್ಷೇಮ ಕೇಂದ್ರವನ್ನು ಉದ್ಘಾಟಿಸಲಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

ಬಾಗಲಕೋಟೆಯ, ಚಾಮುಂಡೇಶ್ವರಿ ಸಂಜೀವಿನಿ ಮಹಿಳಾ ಒಕ್ಕೂಟದ ಮುಡಿಗೆ, ರಾಷ್ಟ್ರೀಯ ಆತ್ಮನಿರ್ಭರ ಸಂಘಟನಾ ಪ್ರಶಸ್ತಿಯ, ಗರಿ.

ಕಲ್ಯಾಣ ಕರ್ನಾಟಕಕ್ಕೆ, ಹಸಿರು ಪಥ ಯೋಜನೆ; ರಾಜ್ಯ ವನ ಮಹೋತ್ಸವಕ್ಕೆ ಇಂದು, ಅರಣ್ಯ ಇಲಾಖೆ, ಚಾಲನೆ.

ಅಸಂಘಟಿತ ವಲಯದ, 35 ಲಕ್ಷ ಕಾರ್ಮಿಕರಿಗೆ, ಕಾರ್ಮಿಕ ಇಲಾಖೆಯಿಂದ, ಉಚಿತ ಸ್ಮಾರ್ಟ್ ಕಾರ್ಡ್ ವಿತರಣೆ.

ಇಂದು ಅಂತಾರಾಷ್ಟ್ರೀಯ ಸಹಕಾರ ದಿನಾಚರಣೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ